# ನ್ಯಾಯದ ಗಂಟೆ

ಜನತೆಯ ಬೇಡಿಕೆಗಳಿಗೆ ಕಿವಿಗೊಡದ ಪ್ರಭುತ್ವಗಳನ್ನು ಸರಿದಾರಿಗೆ ತರುವ ಅನೇಕ ಪ್ರಯೋಗಗಳನ್ನು ಜನ ಎಲ್ಲ ಕಾಲದಲ್ಲೂ ಮಾಡುತ್ತಿರುತ್ತಾರೆ. ಪ್ರಭುತ್ವವೊಂದು ತನ್ನ ಪ್ರಜೆಗಳ ಪರವಾಗಿ ಮಾನವೀಯ, ದಯಾಪರ ಹಾಗೂ ಕ್ರಿಯಾಶೀಲವಾಗಿರಬೇಕೆಂಬುದೇ ಇದರ ಮೂಲ ಉದ್ದೇಶ. ಪ್ರಭುತ್ವಗಳ ಚರಿತ್ರೆಯನ್ನು ನೋಡಿದರೆ ಯುದ್ಧ, ಹಿಂಸೆ, ಬಂಧನ, ತೆರಿಗೆ ಹಾಗೂ ಇತರ ಕಠೋರ ಶಿಕ್ಷಾಕ್ರಮಗಳಿಲ್ಲದ ಆಳ್ವಿಕೆಯೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಆಳರಸರ ದುರ್ನಡತೆಗಳು ಕಣ್ಣಮುಂದೆ ನಿಲ್ಲುತ್ತವೆ. ತನ್ನ ದಾರಿಯೇ ಸರಿ ಎಂದು ತಿಳಿದ ಯಾವುದೇ ದೊರೆಯ ರಾಜ್ಯದ ಜನರಲ್ಲಿ ಬದುಕಿನ ಸಣ್ಣ ಸಣ್ಣ ಸಂತೋಷಗಳು, ಹಾಸ್ಯಪ್ರಜ್ಞೆ, ಹಾಗೂ ಸೌಂದರ್ಯವನ್ನು ಆಸ್ವಾದಿಸುವ ಮನಸ್ಸು ಸಂಪೂರ್ಣವಾಗಿ ನಾಶವಾಗಿರುತ್ತದೆ.

ಊಳಿಗಮಾನ್ಯ ಕಾಲದ ಪ್ರಭುತ್ವಗಳಿಗಿಂತ ಹೆಚ್ಚಾಗಿ ಈಗಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತರತಮ ಭಾವಗಳಿಂದ ಜನತೆಗೆ ಸವಲತ್ತುಗಳನ್ನು ನೀಡುತ್ತಿರುವುದು ದಿಗ್ಭ್ರಾಂತಿ ಹುಟ್ಟಿಸುತ್ತದೆ! ಸಾವಿನ ಮನೆಯಲ್ಲೂ 'ಧರ್ಮ' ಮತ್ತು 'ಜಾತಿ'ಯನ್ನು ಬೆರಕೆ ಮಾಡಿ ನೆರವನ್ನು ನೀಡುತ್ತಿರುವುದು, ಬಡವರ ತಟ್ಟೆಯಲ್ಲಿರುವ ರೊಟ್ಟಿಯನ್ನು ಕಿತ್ತುಕೊಂಡು ಬಲಿಷ್ಠರಿಗೆ ಕೊಡುವುದು ಮಾನವತೆಯ ತುಚ್ಛ ನಡವಳಿಕೆಯೇ ಸರಿ. ಪ್ರಭುತ್ವವೊಂದರ ಇಂತಹ ದುರ್ನಡತೆಗಳನ್ನು ನೋಡಿಯೇ 'ದೀನದಲಿತರನ್ನಪ್ಪಿಕೊಳ್ಳುವ ನಿಜವಾದ ಸಂತರು', ಅನುಭಾವಿಗಳು, ತತ್ತ್ವಜ್ಞಾನಿಗಳು ಅಧಿಕಾರ ಕೇಂದ್ರಗಳಿಂದ ದೂರವುಳಿದು ವ್ಯವಸ್ಥೆಯ ವಿರುದ್ಧವಾಗಿಯೇ ಈಜುತ್ತಿರುತ್ತಾರೆ.

ಕನ್‌ಫ್ಯೂಷಿಯಸ್ ಒಮ್ಮೆ ತನ್ನ ಶಿಷ್ಯರೊಂದಿಗೆ ಸಂತನೊಬ್ಬನನ್ನು ನೋಡಲು ಹೋಗುತ್ತಿದ್ದ. ಮಾರ್ಗಮಧ್ಯದಲ್ಲಿ ಒಬ್ಬ ಮುದುಕಿ ಒಂದು ಸಮಾಧಿಯ ಮುಂದೆ ಕುಳಿತು ಅಳುತ್ತಿದ್ದುದನ್ನು ಕಂಡ. ಅವಳ ಪಕ್ಕದಲ್ಲೇ ಇನ್ನೂ ಎರಡು ಸಮಾಧಿಗಳಿದ್ದವು. ಮುದುಕಿಯ ಅಳುವಿಗೆ ಕಾರಣ ಏನೆಂದು ಕನ್‌ಫ್ಯೂಷಿಯಸ್ ಕೇಳಿದ. ಆಕೆ ಹೇಳಿದಳು: 'ನನ್ನ ಗಂಡನ ತಂದೆ ಅಂದರೆ ನನ್ನ ಮಾವ ಇಲ್ಲೇ ಹುಲಿಯಿಂದ ಸತ್ತ, ಹಾಗೆಯೇ ನನ್ನ ಗಂಡನೂ ಹುಲಿಯಿಂದ ಸತ್ತ; ಈಗ ನನ್ನ ಮಗನೂ ಹುಲಿಗೆ ಬಲಿಯಾಗಿದ್ದಾನೆ' ಎಂದು ಅಳುತ್ತಾ ಹೇಳಿದಳು. ಅದಕ್ಕೆ ಕನ್‌ಫ್ಯೂಷಿಯಸ್ ಹೇಳಿದ, 'ಹೀಗಿದ್ದೂ ಏಕೆ ಇಂತಹ ಅಪಾಯಕಾರಿ ಸ್ಥಳದಲ್ಲಿ ಬದುಕುತ್ತಿದ್ದೀಯಾ?'. ಅದಕ್ಕೆ ಮುದುಕಿ, 'ಇಲ್ಲಿ ಬಡವರ ದನಿ ಅಡಗಿಸುವ ದಮನಕಾರಿ ಸರ್ಕಾರವಿಲ್ಲ, ಆಜ್ಞೆಯ ಯಾವ ಶಬ್ದವೂ ನನ್ನ ಕಿವಿಗೆ ಬೀಳುವುದಿಲ್ಲ!' ಎಂದು ಉತ್ತರಿಸಿದಳು. ಹುಲಿಗಿಂತ ಕ್ರೂರವಾದ ಆಡಳಿತ ವ್ಯವಸ್ಥೆಯಲ್ಲಿ ಬದುಕಲು ಯಾರೂ ಇಚ್ಛಿಸುವುದಿಲ್ಲ!

ಇಲ್ಲಿ ನಿರಂತರ ದಮನಕ್ಕೆ ಒಳಗಾಗುವ ಹರಿಜನ, ಆದಿವಾಸಿ, ಅಲ್ಪಸಂಖ್ಯಾತ ಹಾಗೂ ಕೆಳಸಮುದಾಯಗಳ ಜನರಿದ್ದಾರೆ. ಎಲ್ಲಿಯವರೆಗೆ ಇವರೆಲ್ಲ ಸುಖವಾಗಿರಲಾರರೋ ಅಲ್ಲಿಯವರೆಗೆ ಭಾರತ ಸುಖಿಯಾಗಿರಲಾರದು. ಇಂತಹ ಮಾನವ ತತ್ತ್ವಕ್ಕಾಗಿ ಪ್ರಭುತ್ವದ ಮನೋಧರ್ಮವೇ ಬದಲಾಗಬೇಕು. ಅಧಿಕಾರವೆನ್ನುವುದು ಜಾತಿ ಮತ್ತು ವರ್ಗಗಳ ನಡುವೆ ನಡೆಯುವ ಹಂಚಿಕೆಯಲ್ಲ! ಅದೊಂದು ಜನಕಲ್ಯಾಣಕ್ಕಾಗಿ ವಿನಿಯೋಗಿಸಬೇಕಾದ ಎಡೆ.

ನವಾಬನೊಬ್ಬ ತನ್ನ ರಾಜ್ಯದಲ್ಲಿ ಮನುಷ್ಯರಾಗಲಿ ಅಥವಾ ಯಾವುದೇ ಪ್ರಾಣಿಯಾಗಲಿ ಹಸಿವಿನಿಂದ ನರಳಬಾರದು! ಎಲ್ಲರಿಗೂ ಆಹಾರ ದೊರಕಬೇಕು. ಆಹಾರವಿಲ್ಲದೆ ಅನ್ಯಾಯಕ್ಕೆ ಒಳಗಾದವರು ಯಾರೇ ಆಗಿರಲಿ, ಅವರು ನನ್ನ ಅರಮನೆಯ ಮುಂದೆ ಕಟ್ಟಿರುವ ನ್ಯಾಯದ ಗಂಟೆಯನ್ನು ಬಾರಿಸಿದರೆ ಅವರಿಗೆ ನಾನೇ ಖುಲ್ಲಾ ನ್ಯಾಯ ದೊರಕಿಸಿಕೊಡುತ್ತೇನೆ ಎಂದು ಫರ್ಮಾನು ಹೊರಡಿಸಿದ. ಹೀಗೇ ದಿನಗಳು ಕಳೆದವು. ಯಾರೂ ಒಂದು ನ್ಯಾಯದ ಗಂಟೆಯನ್ನು ಬಾರಿಸಲೇ ಇಲ್ಲ! ಇದರಿಂದ ನವಾಬ ತನ್ನ ರಾಜ್ಯ ಸುಭಿಕ್ಷವಾಗಿದೆ ಎಂದು ಭಾವಿಸಿ ಸಂತೋಷದಿಂದ ಇದ್ದ. ಒಂದು ದಿನ ಇದ್ದಕ್ಕಿದ್ದಂತೆಯೇ ಅರಮನೆಯ ಮುಂದೆ ಕಟ್ಟಿದ್ದ ನ್ಯಾಯದ ಗಂಟೆಯ ಶಬ್ದ ಕೇಳಿಬಂತು. ವಿಶ್ರಾಂತಿಯಲ್ಲಿದ್ದ ನವಾಬ ಆಶ್ಚರ್ಯದಿಂದ ಹೊರಗೆ ಬಂದು ನೋಡಿದ. ಬಡಕಲಾಗಿದ್ದ ಒಂಟೆಯೊಂದು ಗಂಟೆಗೆ ಕಟ್ಟಿದ್ದ ಒಣಹುಲ್ಲಿನ ಹಗ್ಗವನ್ನು ಕಚ್ಚಿ ಎಳೆದು ತಿನ್ನುತ್ತಿತ್ತು. ಇದನ್ನು ನೋಡಿದ ನವಾಬನಿಗೆ ಅನಿಸಿತು, ಯಾರೋ ಇದರ ಒಡೆಯ ಅನೇಕ ದಿನಗಳಿಂದ ಈ ಒಂಟೆಗೆ ಹುಲ್ಲು ನೀಡಿಲ್ಲ! ಆದ್ದರಿಂದಲೇ ಹಸಿದ ಒಂಟೆ ಈ ಒಣಹುಲ್ಲಿನ ಹಗ್ಗವನ್ನು ತಿನ್ನುತ್ತಿದೆ ಎಂದು ತಿಳಿದ. ಕೂಡಲೇ ಆ ಒಂಟೆಯ ಯಜಮಾನನನ್ನು ಸೇವಕರ ಮೂಲಕ ಅರಮನೆಗೆ ಕರೆಸಿದ.

ನವಾಬನ ಮುಂದೆ ನಿಂತ ಒಂಟೆಯ ಯಜಮಾನ, ನನ್ನಿಂದ ಏನು ಅಪರಾಧವಾಗಿದೆಯೋ, ಏನು ಶಿಕ್ಷೆ ಕಾದಿದೆಯೋ ಎಂದು ಹೆದರಿ ನಡುಗುತ್ತಿದ್ದ. ಹಸಿವಿನ ಬಗ್ಗೆ ಅರಿವಿದ್ದ ಆ ನವಾಬ, ನೀನು ನಿನ್ನ ಒಂಟೆಗೆ ಕಾಲಕ್ಕೆ ಸರಿಯಾಗಿ ಹುಲ್ಲು ನೀರು ಕೊಟ್ಟಿಲ್ಲ! ಆದ್ದರಿಂದಲೇ ಒಂಟೆ ಹಸಿವಿನಿಂದ ಸೊರಗಿ ನ್ಯಾಯದ ಗಂಟೆಗೆ ಕಟ್ಟಿದ್ದ ಒಣಹುಲ್ಲನ್ನೇ ತಿನ್ನಲು ಮುಂದಾಗಿದೆ. ಇದು ನಿನ್ನ ಹಸಿದ ಒಂಟೆ ನನಗೆ ಹೇಳಿದ ದೂರು. ಆದ್ದರಿಂದ ಇನ್ನು ಮೇಲಾದರೂ ನಿನ್ನ ಒಂಟೆಗೆ ಕಾಲಕ್ಕೆ ಸರಿಯಾಗಿ ಹುಲ್ಲು ನೀರು ಕೊಡು. ಇಲ್ಲವಾದರೆ ನಿನ್ನನ್ನು ಕಾರಾಗೃಹಕ್ಕೆ ಹಾಕುತ್ತೇನೆ ಎಂದು ಹೆದರಿಸಿ ಕಳುಹಿಸಿದ. ಹೇಗೆ ವ್ಯಾಖ್ಯಾನಿಸಿದರೂ ಮಾನವತೆಗೆ ಹೊಳಪು ನೀಡುವಂಥ ಘಟನೆ ಇದು. ಯಾವುದೇ ಆಡಳಿತ ವ್ಯವಸ್ಥೆ ನ್ಯಾಯಪರತೆ, ಮಾನವತೆ, ಸಭ್ಯತೆಗಳಿಂದ ಆರಂಭವಾಗಿ ಲೋಕಹಿತದೊಂದಿಗೆ ಬೆಳೆಯುತ್ತದೆ.

ಆದ್ದರಿಂದಲೇ ಬುದ್ಧದೇವ ಹೇಳಿದ್ದು – 'ಹಸಿದ ಹೊಟ್ಟೆಗೆ ಮೊದಲು ಬೇಕಿರುವುದು ಅನ್ನ, ಆಮೇಲೆ ಧರ್ಮ'.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಸರಳತೆಯು ಪರಿಪೂರ್ಣತೆಯ ಲಕ್ಷಣ.
  —ಪಂಡಿತ ತಾರಾನಾಥ
- ಸತ್ಯಕ್ಕೆ ಹೆದರುವವನು ಅಥವಾ ನಾಚುವವನು ನಿಜವಾದ ಜಿಜ್ಞಾಸುವಾಗಲಾರನು.
  —ಕುವೆಂಪು
- ಅಪ್ರಿಯವಾದರೂ ಸತ್ಯವನ್ನು ಹೇಳಬೇಕಾದುದು ಹಿತೈಷಿಯ ಧರ್ಮ.
  —ಅನಕೃ
- ಕೆಲಸ ಮಾಡುತ್ತಿದ್ದರೆ ಬಡತನ ಇರುವುದಿಲ್ಲ. ಮೌನವಾಗಿದ್ದರೆ ಜಗಳ ಉಂಟಾಗುವುದಿಲ್ಲ.
  —ಚಾಣಕ್ಯ
- ದುಡಿಮೆಗೆ ಗುರಿಯಿರಲಿ, ದುಡಿಯುವುದರಲ್ಲಿ ನಿಯಮವಿರಲಿ.
  —ಎಂ. ವಿಶ್ವೇಶ್ವರಯ್ಯ
- ನಿಮಗೆ ಸೂರ್ಯನಂತೆ ಮಿಂಚುವ ಆಸೆಯಿದ್ದರೆ ಮೊದಲು ಸೂರ್ಯನಂತೆ ಉರಿಯುವುದನ್ನು ಕಲಿಯಿರಿ.
  —ಎ.ಪಿ.ಜೆ. ಅಬ್ದುಲ್ ಕಲಾಂ
- ಜೀವನವು ಬಸ್ಸಿನ ಪ್ರಯಾಣವಿದ್ದಂತೆ, ಓಡುವಾಗ ಗಾಳಿ ಬಹಳ, ನಿಂತಾಗ ವಿಪರೀತ ಸೆಕೆ.
  —ಬೀಚಿ
- ಹೋದ ಐಶ್ವರ್ಯ ಸಿಗಬಹುದು, ಹೋದ ಹೊತ್ತು ಸಿಗುವುದಿಲ್ಲ.
  —ಅನಕೃ
- ಮೂರ್ಖರು ಕೀರ್ತಿ ಗಳಿಸುವರು. ಬುದ್ಧಿಶಾಲಿಗಳು ಗೌರವ ಸಂಪಾದಿಸುವರು.
  —ರವೀಂದ್ರನಾಥ ಟ್ಯಾಗೋರ್
- ಕಾಲ ಚೆನ್ನಾಗಿದ್ದರೆ ಹಾವು ಹೂವಾಗಬಲ್ಲದು.
  —ವಿಲಿಯಂ ಶೇಕ್ಸ್‌ಪಿಯರ್
- ಸಂಕಷ್ಟಗಳಿಲ್ಲದಿದ್ದರೆ ನಮ್ಮ ತಪ್ಪುಗಳಿಂದ ನಾವು ಪಾಠ ಕಲಿಯುವುದಿಲ್ಲ.
  —ಏಂಜಲಿನಾ ಜೋಲಿ